# ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗ

## ಗ್ರಾಮೀಣ ಕೃಷಿ ಹವಾಮಾನ ಸೇವಾ ಯೋಜನೆ

## ದಕ್ಷಿಣ ಕನ್ನಡ ಜಿಲ್ಲೆಯ ಕೃಷಿ ಹವಾಮಾನ ಸಲಹಾ ಸೂಚಕ

(ಭಾರತೀಯ ಹವಾಮಾನ ಇಲಾಖೆ ಪುಣೆ ಮತ್ತು ಬೆಂಗಳೂರು ಹಾಗೂ ಗ್ರಾಮೀಣ ಕೃಷಿ ಹವಾಮಾನ ಸೇವಾ ಯೋಜನೆ, ಬ್ರಹ್ಮಾವರ–576213, ಉಡುಪಿ ಜಿಲ್ಲೆ ಕರ್ನಾಟಕ ಇವರ ಜಂಟಿ ಪ್ರಸಾರ)

### ಹವಾಮಾನ ಮುನ್ಸೂಚನೆಯ ಅವಧಿ 09-11-2024 ರಿಂದ 13-11-2024

ಸಂ. ಗ್ರಾ.ಕೃ.ಹ.ಸೇ.ಬ/069/2024 ದಿನಾಂಕ: 08.11.2024

ಭಾರತೀಯ ಹವಾಮಾನ ಇಲಾಖೆ ಪುಣೆ ಮತ್ತು ಬೆಂಗಳೂರು, ಇವರು ದಕ್ಷಿಣ ಕನ್ನಡ ಜಿಲ್ಲೆಗೆ ಮುಂದಿನ ಐದು ದಿನಗಳು ದಿನಾಂಕ 09-11-2024 ರಿಂದ 13-11-2024 ರ ವರೆಗೆ ಲಭ್ಯವಿರುವ ಹವಾಮಾನ ಮುನ್ಸೂಚನೆ ಈ ಕೆಳಕಂಡಂತೆ ನೀಡಿರುತ್ತಾರೆ

| ಹವಾಮಾನದ ಅಂಶಗಳು | ಕ್ರೋಢೀಕರಿಸಿದ ಹವಾಮಾನ ಮುನ್ಸೂಚನೆ | | | | | ಹಿಂದಿನ ವಾರದ ಹವಾಮಾನ ಪರಿಸ್ಥಿತಿಯ ಒಟ್ಟು/ಸರಾಸರಿ | ಮುಂದಿನ ಐದು ದಿನಗಳ ಹವಾಮಾನ ಮುನ್ಸೂಚನೆಯ ಒಟ್ಟು/ಸರಾಸರಿ |
|---|---|---|---|---|---|---|---|
| | ದಿನ–1 (09.11.2024) | ದಿನ–2 (10.11.2024) | ದಿನ–3 (11.11.2024) | ದಿನ–4 (12.11.2024) | ದಿನ–5 (13.11.2024) | | |
| ಮಳೆ ಪ್ರಮಾಣ (ಮಿ.ಮೀ.) | 0 | 0 | 1 | 0 | 0 | 16.8 | 1↓ |
| ಗರಿಷ್ಠ ಉಷ್ಣಾಂಶ (ºC) | 32.6 | 32.9 | 32.2 | 32 | 32.2 | 33.7 | 32.4↓ |
| ಕನಿಷ್ಠ ಉಷ್ಣಾಂಶ (ºC) | 22.9 | 22.6 | 22.2 | 22.7 | 23.1 | 22.4 | 22.7↑ |
| ಮೋಡದ ಹೊದಿಕೆ (ಒಕ್ಟಾ) | 5 | 4 | 5 | 5 | 7 | 4 | 5↑ |
| ಗರಿಷ್ಠ ಆರ್ದ್ರತೆ (ಶೇ.) | 94 | 91 | 90 | 86 | 85 | 85.2 | 89↑ |
| ಕನಿಷ್ಠ ಆರ್ದ್ರತೆ (ಶೇ.) | 46 | 44 | 44 | 45 | 40 | 58.8 | 44↓ |
| ಗಾಳಿಯ ವೇಗ (Kmph) | 4.7 | 5.4 | 4.7 | 4.3 | 5.1 | 4.6 | 4.8↑ |
| ಗಾಳಿಯ ದಿಕ್ಕು (º) | 81 | 86 | 86 | 85 | 86 | 116 | 85↓ |
| ಮುನ್ಸೂಚನೆ | NIL | NIL | NIL | NIL | NIL | | |
| ಸಂಭವನೀಯತೆ (%) | 0 | 0 | 0 | 0 | 0 | | |

**ಭಾರತ ಹವಾಮಾನ ಇಲಾಖೆ, ನವದೆಹಲಿ ಮತ್ತು ರಾಜ್ಯ ಹವಾಮಾನ ಇಲಾಖೆ, ಬೆಂಗಳೂರು ಇವರು ನೀಡಿರುವ ವಿಸ್ತೃತ ಮಳೆ ಮುನ್ಸೂಚನೆಯ ಪ್ರಕಾರ ಕರ್ನಾಟಕದ ಕರಾವಳಿ ತೀರ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗೆ ದಿನಾಂಕ 13.11.2024 ರಿಂದ 19.11.2024 ರವರೆಗೆ ವಾಡಿಕೆ ಮಳೆಯಾಗುವ ಸಂಭವವಿದೆ.**

### ಹವಾಮಾನ ಪರಿಸ್ಥಿತಿ ಮತ್ತು ಮುನ್ಸೂಚನೆ ಸಾರಾಂಶ




ಭಾರತೀಯ ಹವಾಮಾನ ಇಲಾಖೆ ಪುಣೆ ಮತ್ತು ಬೆಂಗಳೂರು ಇವರು, ದಕ್ಷಿಣ ಕನ್ನಡ ಜಿಲ್ಲೆಗೆ ನೀಡಿದ ಮುನ್ಸೂಚನೆಯ ಪ್ರಕಾರ, **ಮುಂದಿನ ಐದು ದಿನಗಳಲ್ಲಿ ಭಾಗಶ: ಮೋಡಕವಿದ ವಾತಾವರಣವಿದ್ದು ಜಿಲ್ಲೆಯಾದ್ಯಂತ ಒಣಹವೆ ಜೊತೆಗೆ ತುಂತುರು ಮಳೆಯಾಗುವ ಸಾಧ್ಯತೆ ಇದೆ.** ಮುಂದಿನ ಐದು ದಿನಗಳಲ್ಲಿ ಗರಿಷ್ಠ ತಾಪಮಾನವು **32.0-32.9ºC** ಇರುತ್ತದೆ ಮತ್ತು ಕನಿಷ್ಠ ತಾಪಮಾನವು **22.2-23.1ºC** ಇರುತ್ತದೆ. ಸರಾಸರಿ ಸಾಪೇಕ್ಷ ಆದ್ರತೆಯು ಬೆಳಗಿನ ಸಮಯದಲ್ಲಿ **85%** ರಿಂದ **94%** ರಷು ಇರುತ್ತದೆ. ಹಾಗೂ ಮಧ್ಯಾಹ್ನದ ಸಮಯದಲ್ಲಿ **40%** ರಿಂದ **46%** ರಷ್ಟು ಇರುತ್ತದೆ. ಸರಾಸರಿ ಗಾಳಿಯ ವೇಗವು **4-6** ಕೀ.ಮೀ. ಪ್ರತಿ ಘ,ವೇಗದಲ್ಲಿ ಬೀಸಲಿದೆ. ಈ ಹವಾಮಾನ ಪರಿಸ್ಥಿತಿಯನ್ನು ಪರಿಗಣಿಸಿದರೆ, ರೈತರು ಈ ಕೆಳಕಂಡ ಕೃಷಿ ಸಲಹೆಗಳನ್ನು ಅನುಸರಿಸುವಂತೆ ಸಲಹೆ ನೀಡಲಾಗಿದೆ.

**Mobile Applications developed by India Meteorological Department for the benefit of Farming Community Farmers are suggested to download the app using below links**

| | Mausam: | Meghdoot: | Damini: |
|---|---|---|---|
| Andriod: | https://play.google.com/store/apps/details?id=com.imd.masuam | https://play.google.com/store/apps/details?id=com.aas.meghdoot | https://play.google.com/store/apps/details?id=com.lightening.live.damini |
| Apple OS: | https://apps.apple.com/us/app/id1522893967 | https://apps.apple.com/in/app/meghdoot/id1474048155 | https://apps.apple.com/app/id1502385645 |

**Decadal Rainfall (mm) Comparison:**

| Year | 30 years Mean | 2013 | 2014 | 2015 | 2016 | 2017 | 2018 | 2019 | 2020 | 2021 | 2022 | 2023 | 2024 |
|---|---|---|---|---|---|---|---|---|---|---|---|---|---|
| Rainfall | 3710.5 | 3325.3 | 2816.3 | 2383.4 | 2827.1 | 3000 | 3381.2 | 4118.4 | 4110.8 | 4110.8 | 3879.9 | 3316.6 | 3618.4 |
| Rainy days | 105 | 127 | 112 | 107 | 119 | 121 | 112 | 123 | 126 | 152 | 125 | 105 | 130 |

| Realised Rainfall (31st OCTO to 06th Nov, 2024) | Rainfall Forecast Map (08th Nov to 14th Nov 2024) | Temperature conditional Index Outlook (28.10.2024 to 03.11.2024) | Normalized Difference Vegetation Index |
|---|---|---|---|
|  |  |  |  |

| Warnings for Costal Karnataka | |
|---|---|
| Date of Issue: November 7, 2024 | |
| Day 1:November 7, 2024 | No Warning |
| Day 2: November 8, 2024 | No Warning |
| Day 3: November 9, 2024 | No Warning |
| Day 4: November 10, 2024 | No Warning |
| Day 5: November 11, 2024 | No Warning |

## ದಕ್ಷಿಣ ಕನ್ನಡ ಜಿಲ್ಲೆಗೆ ನೀಡಿದ ಹವಾಮಾನ ಮುನ್ಸೂಚನೆ ಆಧಾರಿಸಿ ನೀಡಿದ ಕೃಷಿ ಸಲಹೆಗಳು

### ತೋಟಗಾರಿಕೆ ಬೆಳೆಗಳು:

| | |
|---|---|
| ಅಡಿಕೆ (ಕಳೆ ನಿಯಂತ್ರಣ) | ➢ ತೋಟಗಳಲ್ಲಿ ಕಳೆ ನಿಯಂತ್ರಿಸಲು ಗ್ಲೈಫೋಸೆಟ್ 41% ಎಸ್.ಎಲ್ @ 6ಮಿಲೀ/ಲೀ ಅಥವಾ ಗ್ಲೈಫೋಸೆಟ್ 54% ಎಸ್.ಸಿ @ 4 ಮಿಲೀ/ಲಿ ಅಥವಾ ಗ್ಲೈಫೋಸೆಟ್ 71% ಎಸ್.ಜಿ. 6 ಗ್ರಾಂ. ಪ್ರತಿ ಲೀಟರ್ ನೀರಿಗೆ ಬೆರೆಸಿ ಕಳೆಗಳ ಮೇಲೆ ಸಿಂಪಡಿಸಿ. ಅಡಿಕೆ ಮರಕ್ಕೆ ಸಿಂಪರಣೆ ತಗುಲದಂತೆ ಎಚ್ಚರ ವಹಿಸಿ.<br>➢ ಒಣಗಿದ ಹಿಂಗಾರ ಮತ್ತು ರೋಗ/ಕೀಟ ಭಾದೆಗೆ ತುತ್ತಾದ ಅಡಿಕೆ ಕಾಯಿಗಳನ್ನು ಸಂಗ್ರಹಿಸಿ ನಾಶ ಮಾಡುವುದು. |
| ಅಡಿಕೆ (ನೀರು ನಿರ್ವಹಣೆ) | ಅಡಿಕೆ ಗಿಡದ ಬುಡ ಭಾಗವನ್ನು ಒಣಗಿದ ತರಗೆಲೆ ಅಥವಾ ಬೆಳೆಯ ಅವಶೇಷಗಳಿಂದ ಹೊದಿಕೆ ಮಾಡುವುದು.ಇದರಿಂದ ತೇವಾಂಶ ನಷ್ಟವಾಗುವುದನ್ನು ತಪ್ಪಿಸಬಹುದಾಗಿದೆ. ಪ್ರತಿ ದಿನ ಪ್ರತಿ ಗಿಡಕ್ಕೆ 20 ಲೀ. ನೀರನ್ನು ಒದಗಿಸುವುದು ಸೂಕ್ತ. |
| ಅಡಿಕೆ (ಎಲೆ ಚುಕ್ಕೆ ರೋಗ) | ಎಲೆ ಚುಕ್ಕೆ ರೋಗ ನಿರ್ವಹಣೆ ಮಾಡಲು ರೈತರು ರೋಗ ಭಾಧಿತ ಎಲೆಗಳಿಗೆ ಹೆಕ್ಸಾಕೊನಾಜೋಲ್ ಅಥವಾ ಪ್ರೊಪಿಕೊನಾಜೋಲ್ ಅಥವಾ ಡೈಫೈನಜೋಲ್ 1ಎಂ.ಎಲ್ ಪ್ರತಿ ಲೀಟರ್ ನೀರಿಗೆ ಬೆರಸಿ ಸಿಂಪಡಿಸುವುದು. |
| ತೆಂಗು (ನೀರು ನಿರ್ವಹಣೆ) | ತೆಂಗಿನ ಗಿಡದ ಬುಡ ಭಾಗವನ್ನು ಒಣಗಿದ ತರಗೆಲೆ ಅಥವಾ ಬೆಳೆಯ ಅವಶೇಷಗಳಿಂದ ಹೊದಿಕೆ ಮಾಡುವುದು.ಇದರಿಂದ ತೇವಾಂಶ ನಷ್ಟವಾಗುವುದನ್ನು ತಪ್ಪಿಸಬಹುದಾಗಿದೆ. ಪ್ರತಿ ದಿನ ಪ್ರತಿ ಗಿಡಕ್ಕೆ 35 ಲೀ. ನೀರನ್ನು ಒದಗಿಸುವುದು ಸೂಕ್ತ. |
| ತೆಂಗು (ಕಳೆ ನಿರ್ವಹಣೆ) | ತೋಟಗಳಲ್ಲಿ ಕಳೆ ನಿಯಂತ್ರಿಸಲು ಗ್ಲೈಫೋಸೆಟ್ 41% ಎಸ್.ಎಲ್ @ 6ಮಿಲೀ/ಲೀ ಅಥವಾ ಗ್ಲೈಫೋಸೆಟ್ 54% ಎಸ್.ಸಿ @ 4 ಮಿಲೀ/ಲಿ ಅಥವಾ ಗ್ಲೈಫೋಸೆಟ್ 71% ಎಸ್.ಜಿ. 6 ಗ್ರಾಂ. ಪ್ರತಿ ಲೀಟರ್ ನೀರಿಗೆ ಬೆರೆಸಿ ಕಳೆಗಳ ಮೇಲೆ ಸಿಂಪಡಿಸಿ. ತೆಂಗಿನ ಮರಕ್ಕೆ ಸಿಂಪರಣೆ ತಗುಲದಂತೆ ಎಚ್ಚರ ವಹಿಸಿ. |
| ಬಾಳೆ (ಸಾಮಾನ್ಯ ಸಲಹೆ) | ➢ 5 ತಿಂಗಳ ನಂತರ ಪ್ರತಿ ಲೀಟರ್ ನೀರಿಗೆ 5ಗ್ರಾಂ. ಬನಾನ ಸ್ಪೆಷಲ್(ಲಘು ಪೋಷಕಾಂಶ) ಮಿಶ್ರಿಸಿ ಸಿಂಪಡಿಸುವುದು. (15ಲೀ. ಸ್ಪ್ರೇಯರ್‌ಗೆ ಒಂದು ನಿಂಬೆ ಹಣ್ಣು ಹಾಗೂ ಒಂದು ಶಾಂಪೂವನ್ನು ಬೆರೆಸಬೇಕು)<br>➢ ಬಾಳೆ ಬೆಳೆಯಲ್ಲಿ ಉತ್ತಮ ಗುಣಮಟ್ಟ ಹಾಗೂ ಅಧಿಕ ಇಳುವರಿ ಪಡೆಯಲು ಪ್ರತಿ ಬಾಳೆಗೊನೆಗೆ 10ಗ್ರಾಂ. ಯುರಿಯಾ+10ಗ್ರಾಂ. ಪೊಟ್ಯಾಷಿಯಂ ಸಲ್ಫೇಟ್+0.5ಕಿ.ಗ್ರಾ. ಹಸಿ ಸಗಣಿಯನ್ನು 100ಮಿ.ಲೀ ನೀರಿಗೆ ಬೆರೆಸಿ ಗೊನೆಯ ತುದಿಗೆ ಕಟ್ಟುವುದು. |
| ಕಾಳುಮೆಣಸು (ನೀರು ನಿರ್ವಹಣೆ) | ಬಳ್ಳಿಯ ಗಿಡದ ಬುಡ ಭಾಗವನ್ನು ಒಣಗಿದ ತರಗೆಲೆ ಅಥವಾ ಬೆಳೆಯ ಅವಶೇಷಗಳಿಂದ ಹೊದಿಕೆ ಮಾಡುವುದು.ಇದರಿಂದ ತೇವಾಂಶ ನಷ್ಟವಾಗುವುದನ್ನು ತಪ್ಪಿಸಬಹುದಾಗಿದೆ. ಪ್ರತಿ ದಿನ ಪ್ರತಿ ಗಿಡಕ್ಕೆ 35 ಲೀ. ನೀರನ್ನು ಒದಗಿಸುವುದು ಸೂಕ್ತ. |
| ಮಲ್ಲಿಗೆ (ಎಲೆ ಚುಕ್ಕೆ ರೋಗ) | ರೋಗಕ್ಕೆ ತುತ್ತಾದ ಎಲೆಗಳನ್ನು ಕಿತ್ತು ನಾಶ ಪಡಿಸುವುದು. ನಂತರ ಹತೋಟಿಗಾಗಿ ಹೆಕ್ಸಾಕೊನಾಜೋಲ್1ಮಿ.ಲೀ ಪ್ರತಿ ಲೀಟರ್ ನೀರಿಗೆ ಬೆರಸಿ ಸಿಂಪಡಿಸುವುದು ಸೂಕ್ತ. |
| ಮಲ್ಲಿಗೆ (ಗಿಡ ಸವರುವಿಕೆ) | ಮಲ್ಲಿಗೆ ಗಿಡವನ್ನು ಸವರಲು ಸೂಕ್ತ ಸಮಯವಾಗಿದೆ. ರೋಗ ಭಾಧಿತ ಮತ್ತು ಒಣಗಿದ ಗೆಲ್ಲನ್ನು ಕತ್ತರಿಸಬೇಕು ನಂತರ ಕತ್ತರಿಸಿದ ಭಾಗಕ್ಕೆ 10% ಬೋರ್ಡೋ ಪೇಸ್ಟನ್ನು ಹಚ್ಚಬೇಕು. |
| ಗೇರು (ಕಾಂಡ ಕೊರಕ) | ರೈತರು ಕಾಂಡ ಕೊರಕ ನಿರ್ವಹಣೆ ಮಾಡಲು ಮೊದಲು ಕಾಂಡ ಕೊರಕ ಭಾಧಿತ ರಂಧ್ರವನ್ನು ತಂತಿಯ ಸಹಾಯದಿಂದ ಶುಚಿಗೊಳಿಸಿ ನಂತರ ಕಾಂಡ ಕೊರಕವನ್ನು ಹೊರತೆಗೆದು ನಾಶಪಡಿಸಬೇಕು. ತದನಂತರ 1 ಮಿ.ಲೀ. ಕ್ಲೋರೋಫೈರಿಫಾಸ್ ಅಥವಾ ಮೊನೊಕ್ರೊಟಾಫಾಸ್ ಪೇಸ್ಟ್ ಅನ್ನು ರಂಧ್ರಕ್ಕೆ ಹಚ್ಚುವುದು. ಅಥವಾ ಆ ಭಾಗವನ್ನು ಮರಳು ಮಿಶ್ರಿತ ಕ್ಲೋರೋಫೈರಿಫಾಸ್4ಜಿ. ಅಥವಾ 10ಜಿ. ಹರಳುಗಳಿಂದ ಮುಚ್ಚುವುದು ಸೂಕ್ತ.(1:1 ಪ್ರಮಾಣ) |
| ಗೇರು (ಟೀ ಸೊಳ್ಳೆ) | ಟೀ ಸೊಳ್ಳೆ ನಿರ್ವಹಣೆ ಮಾಡಲು ರೈತರು ಮೊನೊಕ್ರೊಟೋಫಾಸ್ 1.7ಮಿ.ಲೀ/ಲೀ ಅಥವಾ ಲ್ಯಾಮ್ಡಸಯಲೋಥ್ರಿನ್ 0.5ಮಿ.ಲೀ/ಲೀ ಬೆರಸಿ ಸಿಂಪಡಿಸುವುದು. |

## ಕ್ಷೇತ್ರ ಬೆಳೆಗಳು:

| | |
|---|---|
| ಭತ್ತ<br>(ಕಟಾವು) | ➢ ಭತ್ತ ಕಟಾವು ಮಾಡಲು ಸೂಕ್ತ ಸಮಯವಾಗಿದೆ. ಕಟಾವು ಮಾಡುವಾಗ 15 ಸೆ.ಮೀ ನಷ್ಟು ಹುಲ್ಲನ್ನು ಬಿಟ್ಟು ಕಟಾವು ಮಾಡಿ.<br>➢ ಕಟಾವಾದ ಭತ್ತವನ್ನು ಸುರಕ್ಷಿತ ಪ್ರದೇಶದಲ್ಲಿ ಶೇಖರಿಸುವುದು. |
| ಭತ್ತ<br>(ಬೇಸಾಯ ಸಲಹೆ) | ಭತ್ತ ಕಟಾವಾದ ನಂತರ ಎರಡನೆ ಬೆಳೆಯಾಗಿ ಉಳಿಕೆ ತೇವಾಂಶದಲ್ಲಿ ದ್ವಿದಳ ಧಾನ್ಯಗಳಾದ ಉದ್ದು, ಹೆಸರು,ಅವಡೆ ಅಥವಾ ಹಸಿರೆಲೆ ಬೀಜದ ಬೆಳೆಗಳನ್ನು ಬಿತ್ತನೆ ಮಾಡಲು ಸೂಕ್ತ ಸಮಯವಾತದೆ. |

## ಜಾನುವಾರು ಸಲಹೆ:

| | |
|---|---|
| ಹಸು<br>(ಸಾಮಾನ್ಯ ಸಲಹೆ) | ➢ ಜಾನುವಾರುಗಳನ್ನು ಶೀತದಿಂದ ರಕ್ಷಿಸಲು ಕೊಟ್ಟಿಗೆಯಲ್ಲಿ ಕಟ್ಟುವುದು.<br>➢ ಕೊಟ್ಟಿಗೆಯಲ್ಲಿ ಸ್ವಚ್ಛತೆಯನ್ನು ಕಾಪಾಡುವುದು<br>➢ ಜಂತುನಾಶಕಗಳನ್ನು ಬಳಸಲು ಸೂಕ್ತ ಸಮಯವಾಗಿದೆ.<br>➢ ಕೆಚ್ಚಲು ಬಾವನ್ನು ತಡೆಗಟ್ಟಲು ಕೆಚ್ಚಲಿನಿಂದ ಹಾಲನ್ನು ಸಂಪೂರ್ಣವಾಗಿ ಹಿಂಡುವುದು. |

(ಈ ಮೇಲಿನ ಬೆಳೆ ಸಲಹೆಯು ಹವಾಮಾನ ಇಲಾಖೆ, ಬೆಂಗಳೂರು ಇವರು ನೀಡಿರುವ ಹವಾಮಾನ ಮುನ್ಸೂಚನೆಯ ಆಧಾರವಾಗಿದೆ)

ಶ್ರೀ. ಪ್ರವೀಣ್ ಕೆ.ಎಮ್,
ತಾಂತ್ರಿಕ ಅಧಿಕಾರಿಗಳು,
ಜಿ.ಕೆ.ಎಮ್.ಎಸ್–ವಿಭಾಗ,
ವ.ಕೃ.ತೋ.ಸಂ.ಕೇ–ಬ್ರಹ್ಮಾವರ.

ಡಾ. ಕೆ. ವಿ. ಸುಧೀರ್ ಕಾಮತ್,
ನೊಡಲ್ ಅಧಿಕಾರಿಗಳು,
ಜಿ.ಕೆ.ಎಮ್.ಎಸ್–ವಿಭಾಗ,
ವ.ಕೃ.ತೋ.ಸಂ.ಕೇ–ಬ್ರಹ್ಮಾವರ.